# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಹೊಳಲ್ಕೆರೆ.

## ಸಿ.ಸಿ. ನಂ. 1003/2020

ದಿನಾಂಕ 09/12/2025

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಗೌಸ್ ಸಾಹೇಬ್ | ಪಿ.ಡಬ್ಲ್ಯು. | 4 |
| ತಂದೆಯ ಹೆಸರು | : | ಘನಿ ಸಾಬ್ | ಸಿ.ಡಬ್ಲ್ಯು. | 26 |
| ವಯಸ್ಸು | : | 45 ವರ್ಷ | | |
| ಉದ್ಯೋಗ | : | ಎಚ್.ಸಿ.1060, ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆ | | |
| ವಾಸ ಸ್ಥಳ | : | ಹಿರಿಯೂರು | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು 2009 ರಿಂದ 2015 ರವರೆಗೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 23/12/2010 ರಂದು ನಾನು ಮತ್ತು ನಮ್ಮ ಠಾಣಾ ಮೇಲಧಿಕಾರಿಯಾದ ಎಎಸ್ಐ ಕೃಷ್ಣಮೂರ್ತಿಯವರೊಂದಿಗೆ ರಾತ್ರಿ ಗಸ್ತು ಕರ್ತವ್ಯದಲ್ಲಿದ್ದಾಗ ಆ ದಿನ ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ನಾವು ಹೊಳಲ್ಕೆರೆ ಟೌನ್ ನ ವಿಜಿ ಶೆಟ್ರು ಪೆಟ್ರೋಲ್ ಬಂಕ್ ಮುಂದಿರುವ ಎಪಿಎಂಸಿ ತನಿಖಾ ಠಾಣಾ ಪಕ್ಕದಲ್ಲಿರುವ ಟೀ ಸ್ಟಾಲ್ ನಲ್ಲಿ ಟೀ ಕುಡಿಯುತ್ತಿರುವಾಗ ಒಂದು ಮೆಕ್ಕೆಜೋಳ ತುಂಬಿಕೊಂಡಿದ್ದ ಲಾರಿಯ ಚಾಲಕನು ಅಲ್ಲಿಗೆ ಟೀ ಕುಡಿಯಲು ಬಂದಿದ್ದು, ಆ ಲಾರಿಯನ್ನು ಸರಿಯಾಗಿ ಲೋಡ್ ಮಾಡಿರದ ಕಾರಣ ನಾನು ಚಾಲಕನಿಗೆ ಯಾರು ಈ ತರಹ ಲೋಡ್ ಮಾಡಿರುವುದು ಒಂದು ಕಡೆಗೆ ವಾಲಿದೆ ಯಾರ ಮೇಲಾದರೂ ಬಿದ್ದರೆ ಏನು ಗತಿ ಎಂದು ಕೇಳಿದ್ದೆನು. ಆಗ ಅವನು ನಾನೇನು ಮಾಡಲಿ ಹಮಾಲಿಗಳು ಈ ರೀತಿ ಲೋಡ್ ಮಾಡಿದ್ದಾರೆ ಎಂದು ನನಗೆ ಹೇಳಿದ್ದನು. ಆ ಲಾರಿಯಲ್ಲಿ ಅವನೊಬ್ಬನೇ ಇದ್ದು, ಆ ಚಾಲಕನನ್ನು ನಾನು ನೋಡಿದ್ದೆ, ಆತನ ಹೆಸರನ್ನು ಕೇಳಿದಾಗ ನವೀನ್ ಎಂದು ತಿಳಿಸಿದ್ದನು. ನಂತರ ಟೀ ಕುಡಿದು ಆತ ಚಿತ್ರದುರ್ಗದ ಕಡೆಗೆ ಲಾರಿ ತೆಗೆದುಕೊಂಡು ಹೊರಟಿದ್ದನು. ನಂತರ ಅದೇ ದಿನ ಬೆಳಿಗ್ಗೆ 3 ಗಂಟೆ

ಸಮಯದಲ್ಲಿ ಲಾರಿಗೆ ಒಮಿನಿ ವ್ಯಾನ್ ಹಿಂದುಗಡೆಯಿಂದ ಢಿಕ್ಕಿ ಹೊಡೆದು 4 ಜನ ಸ್ಥಳದಲ್ಲಿಯೇ ಮೃತಪಟ್ಟಿರುವುದಾಗಿ ತಿಳಿದುಬಂದಿರುತ್ತದೆ. ಈ ಸಂಬಂಧ ನಾನು ದಿನಾಂಕ 01/03/2011 ರಂದು ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು – ಆರೋಪಿ ಪರ – ಶ್ರೀ ಡಿ.ಜೆ. ವಕೀಲರಿಂದ**

ನಾನು ನಮ್ಮ ಎ.ಎಸ್.ಐ. ಯೊಂದಿಗೆ ಸ್ಥಳಕ್ಕೆ ಹೋದಾಗಲೇ ನವೀನ್ ಲಾರಿಗೆ ಒಮಿನಿ ವ್ಯಾನ್ ಢಿಕ್ಕಿಪಡಿಸಿರುವ ವಿಚಾರ ನನಗೆ ಗೊತ್ತಾಗಿರುತ್ತದೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿಯೇ ಇಲ್ಲ ಮತ್ತು ಅಪಘಾತದ ವಿಚಾರ ನನಗೆ ಗೊತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ. ಹೊಳಲ್ಕೆರೆ ಟೌನ್ ನಲ್ಲಿ ರಾತ್ರಿ ಸಮಯದಲ್ಲಿ ಟೀ ಸ್ಟಾಲ್ ನಡೆಸಲು ನಮ್ಮ ಪೊಲೀಸ್ ಇಲಾಖೆಯವರು ಅನುಮತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಟೀ ಕುಡಿಯುತ್ತಿರುವಾಗ ಲಾರಿ ನಂಬರನ್ನು ನೋಡಿರುವುದಿಲ್ಲ. ರಾತ್ರಿ ಓಡಾಡುವ ಲಾರಿಗಳ ಎಲ್ಲಾ ಚಾಲಕರನ್ನು ನಾವು ಮಾತನಾಡಿಸುವುದಿಲ್ಲ, ಆ ದಿನ ಆರೋಪಿಯು ಟೀ ಕುಡಿಯಲು ಬಂದಿದ್ದರಿಂದ ನಾನು ಆತನನ್ನು ಮಾತನಾಡಿಸಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋದ ಬಗ್ಗೆ ಯಾವುದಾದರೂ ದಾಖಲೆಗಳ ಮೇಲೆ ಸಹಿ ಮಾಡಿರುತ್ತೇನೋ ಇಲ್ಲವೋ ಎಂಬುದು ನನಗೆ ಈಗ ನೆನಪಿಲ್ಲ. ನಾನು ಅಪಘಾತದ ಸ್ಥಳಕ್ಕೆ ಹೋದಾಗ ಅಲ್ಲಿ ಚಾಲಕ ಇರಲಿಲ್ಲ, ಲಾರಿಯಲ್ಲಿ ಲೋಡ್ ವಾಲಿದ್ದರ ಮೇರೆಗೆ ನಾನು ಲಾರಿಯನ್ನು ಗುರುತಿಸಿರುತ್ತೇನೆ. ನಿಂತಿದ್ದ ಲಾರಿಗೆ ಒಮಿನಿ ಚಾಲಕ ಬಂದು ಢಿಕ್ಕಿಪಡಿಸಿರುತ್ತಾನೆ. ನನಗೆ ಖುದ್ದಾಗಿ ಲಾರಿಯನ್ನು ಯಾರು ಓಡಿಸುತ್ತಿದ್ದರು ಎಂಬುದು ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಸಂಗತಿಗಳೆಲ್ಲ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ.

C/C **ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.**